

# ಮುದ್ದು ಜಿಂಕೆ, ಜೋಕೆ !

ಶ್ವೇತ ಸುಂದರ ಚಂದಿರ
ಇರುವನು ಬಲು ದೂರ
ಕಪ್ಪು ಚೆಲುವ ಕಾಕರಾಜ
ಇರುವನಿಲ್ಲೇ ಹತ್ತಿರ.
ಜಿಂಕೆ, ಇಬ್ಬರನೂ
ಕೋಡಿನಲಿ ಹೊತ್ತು ಮೆರೆ
ದೂರದ ಬೆಟ್ಟ ಕಣ್ಣಿಗೆ
ನುಣ್ಣಗೆ ಮರೆಯಬೇಡ.
ಗಗನದ ಚಂದಿರನಿಗಾಗಿ
ಮನದ ಹಣ್ಣ ತೊರೆವರೆ ?
ಬರೀ ಬಣ್ಣಕೆ ಮರುಳಾಗುವರೇ
ಮುದ್ದು ಜಿಂಕೆ, ಜೋಕೆ!

● **ವಿಜಯಾ ಶ್ರೀಧರ್**

# ಗ್ರಹಣ

ವಸ್ತುಗಳಿಗೇನು ಕಡಿಮೆ ಜಗತ್ತಿನಲ್ಲಿ
ಸೂರ್ಯ ಚಂದ್ರರಿದ್ದಾರೆ ಆಗಸದಲ್ಲಿ
ಪ್ರಾಣಿ ಪಕ್ಷಿಗಳು ಭೂಮಿಯಲ್ಲಿ
ಎತ್ತಣಿಂದ ಎತ್ತಣ ಸಂಬಂಧ ಇಲ್ಲಿ?

ಎಲ್ಲಾ ಚಿತ್ರಕಾರನ ಕಲ್ಪನೆ
ಒಂದೊಂದನ್ನು ಎದುರಿಗೆ ತಂದಿದ್ದಾನೆ
ಬೆಳದಿಂಗಳ ಚಂದ್ರನ ಮುಂದೆ
ಜಿಂಕೆಯನ್ನೇ ತಂದು ನಿಲ್ಲಿಸಿದ್ದಾನೆ

ಚಾಚಿವೆ ಗಗನದ ಕಡೆಗೆ
ಜಿಂಕೆಯ ಕೊಂಬು ಕೈಗಳು
ಕಿವಿಗಳು ಆಚೀಚೆ ಅರಳಿವೆ
ಸೂಚಿಸುತಿವೆ ಆತಂಕದ ಚಣಗಳು!

ಹಾರಿ ಬಂದು ಕುಳಿತಿದೆ ಕಾಗೆ
ತಿಳಿಯದೆ ಹಾರುವುದು ಎಲ್ಲಿಗೆ?
ಭೂಮಿಯಾಗಿದೆಯಲ್ಲ ಬರಡು
ಸಮಾನ ದುಃಖದ ಜೀವಗಳು ಎರಡು!

ಬದಲಾಗಬೇಕು ನಮ್ಮ ದೃಷ್ಟಿಕೋನ
ಉಳಿಸೋಣ ನಮ್ಮ ಪರ್ಯಾವರಣ!

● **ಕೊಳ್ಳಪ್ಪೆ ಗೋವಿಂದ ಭಟ್**

